ಕರ್ನಾಟಕ ಸರ್ಕಾರ

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಮಗಳೂರು,

## 2021-22

# ಪರ್ಯಾಯ ಶೈಕ್ಷಣಿಕ ಯೋಜನೆ

ವಿಷಯ:-ಸಮಾಜ ವಿಜ್ಞಾನ

ತರಗತಿ:-6ನೇ ತರಗತಿ

ರಚನೆಗೆ ಸಹಕಾರ:- ತರೀಕೆರೆ ಶೈಕ್ಷಣಿಕ ವಲಯ



ಪರಿಕಲ್ಪನೆ ಮತ್ತು ಮಾರ್ಗದರ್ಶನ

ಪ್ರಾಂಶುಪಾಲರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

ರಾಮನಹಳ್ಳಿ, ಚಿಕ್ಕಮಗಳೂರು

Design by:Sathyaprakash R M Art Teacher

# ಪರಿವಿಡಿ


| ಕ್ರ.ಸಂ. | ಅಧ್ಯಾಯಗಳ ಹೆಸರು | ಪುಟ ಸಂಖ್ಯೆ |
|---|---|---|
| 01. | ನಮ್ಮ ರಾಜ್ಯ ಕರ್ನಾಟಕ–ಇತಿಹಾಸ ಪರಿಚಯ | 3–8 |
| 02. | ನಮ್ಮ ರಾಜ್ಯ ಕರ್ನಾಟಕ ಮೈಸೂರು ವಿಭಾಗ | 9–13 |
| 03. | ಪೌರತ್ವ | 14–16 |
| 04. | ಗ್ಲೋಬ್ ಮತ್ತು ನಕಾಶೆಗಳು | 17–23 |


DIET CHIKK

## ಘಟಕ:– ಇತಿಹಾಸ ಪರಿಚಯ

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

| ಕ್ರ.ಸಂ | ಕಲಿಕಾಂಶ | ರೂಪಿಸಿದ ಚಟುವಟಿಕೆ ( ಲಿಖಿತ ಸಂಭಾಷಣೆ) |
|---|---|---|
| 1 | ನಮ್ಮ ಕರ್ನಾಟಕ ರಾಜ್ಯದ 4 ಕಂದಾಯ ವಿಭಾಗಗಳು ಮತ್ತು ಅವು ಒಳಗೊಳ್ಳುವ ಜಿಲ್ಲೆಗಳು | ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ ಮತ್ತು ಎಲ್ಲಾ ಸೂಚನೆಗಳನ್ನು ಪಾಲಿಸಿ |
| | | 1. ನಮ್ಮ ರಾಜ್ಯ ಯಾವುದು? ________________ |
| | | 2. ನಮ್ಮ ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಿವೆ? ________________ |
| | | 3. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಹೆಸರನ್ನು ನಿನ್ನ ಅಭ್ಯಾಸ ಪುಸ್ತಕದಲ್ಲಿ ಪಟ್ಟಿ ಮಾಡಿ. |
| | | 4. ಕರ್ನಾಟಕ ರಾಜ್ಯ ಯಾವಾಗ ಏಕೀಕರಣವಾಯಿತು? ________________ |
| | | 5. ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಯಾವಾಗ ಬಂದಿತು? ________________ |

**II.** ಈ ಕೆಳಗೆ ನೀಡಿರುವ ಕರ್ನಾಟಕದ ನಕ್ಷೆ ಗಮನಿಸು ಆಡಳಿತ ಅನುಕೂಲಕ್ಕಾಗಿ ನಮ್ಮ ರಾಜ್ಯವನ್ನು 4 ಕಂದಾಯ ವಿಭಾಗಗಳಾಗಿ ವಿಂಗಡಿಸಲಾಗಿದೆ (ದಪ್ಪ ಅಕ್ಷರಗಳಲ್ಲಿ) ಹಾಗೂ ಆಯಾ ವಿಭಾಗದಲ್ಲಿ ಬರುವ ಜಿಲ್ಲೆಗಳನ್ನು ಒಂದೇ ಬಣ್ಣದಲ್ಲಿ ತೋರಿಸಲಾಗಿದೆ, ಅವುಗಳನ್ನು ಗುರುತಿಸಿ ಕೆಳಗೆ ನೀಡಿರುವ ಜಾಗದಲ್ಲಿ ಬರೆಯಿರಿ.

| ವಿಭಾಗ–1 ಜಿಲ್ಲೆಗಳು | ವಿಭಾಗ–2 ಜಿಲ್ಲೆಗಳು | ವಿಭಾಗ–3 ಜಿಲ್ಲೆಗಳು | ವಿಭಾಗ–4 ಜಿಲ್ಲೆಗಳು |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |




DIET CHIKMAGALORE
Not to be republished

## ಘಟಕ:– ಇತಿಹಾಸ ಪರಿಚಯ

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ

| ಕ್ರ.ಸಂ | ಕಲಿಕಾಂಶ | ಚರಿತ್ರೆ ಗೀತೆ |
|---|---|---|
| 1 | ಬೆಂಗಳೂರು ವಿಭಾಗದ ಚಾರಿತ್ರಿಕ ಮತ್ತು ಪ್ರಾಕೃತಿಕ ಹಿನ್ನಲೆ | ಕರ್ನಾಟಕದ ಇತಿಹಾಸದಲ್ಲಿ ಬೆಂಗಳೂರು ವಿಭಾಗದ ಚರಿತೆಯನ್ನು ಹಾಡುವೆ ಕೇಳಿ ನಾ ಹಾಡುವೆ ಕೇಳಿ॥ |
| | | ಗಂಗರು, ಚೋಳರು, ಹೊಯ್ಸಳರು, ಆದಿಲ್ ಶಾಹಿಗಳು, ಮೈಸೂರು ಒಡೆಯರು, ವಿಜಯನಗರದ ಅರಸರೂ ಆಳಿದರಿಲ್ಲಿ ಹರುಷದ ಮಳೆಯನು ಎಲ್ಲೂ ಚೆಲ್ಲಿ ವಿಜಯದ ಕಹಳೆಯ ಊದಿದರು, ಬೆಂಗಳೂರು ಸ್ಥಾಪನೆ ಮಾಡಿದರು ॥ ಕರ್ನಾಟಕ॥ |
| | | ಕಾಡು, ನದಿ, ಕಣಿವೆ, ಜಲಪಾತಗಳಲ್ಲಿ ವೇದಾವತಿ, ಶರಾವತಿ, ತುಂಗಭದ್ರಾ, ಶಿಂಷಾ ಹರಿವವು. ಇಲ್ಲಿ ಜೋಗದ ಸಿರಿಯು ಶಿವಮೊಗ್ಗೆಯಲ್ಲಿ, ಮತ್ತ್ಯಾಲಮಡುವು ಬೆಂಗಳೂರಿನಲ್ಲಿ, ಗಾಜನೂರು ಅಣೆಕಟ್ಟು ಶಿವಮೊಗ್ಗೆಯಲ್ಲಿ, ವಾಣಿವಿಲಾಸ ಚಿತ್ರದುರ್ಗದಲ್ಲಿ, ಈ ಅಂದದ ನಾಡು ನಮ್ಮ ಬೆಂಗಳೂರು ನೋಡು ॥ ಕರ್ನಾಟಕ॥ |
| | | ಚಿನ್ನದ ಕೋಲಾರ, ತಾಮ್ರದ ದುರ್ಗ, ತುಮಕೂರು ಕಬ್ಬಿಣ, ಅಣುವಿನ ಶಕ್ತಿಯು ದುರ್ಗದ ಮಡಿಲಿನಲಿ ಹರಿದ್ವರ್ಣದ ಕಾಡು, ಸಹ್ಯಾದ್ರಿ ಪರ್ವತ ನೋಡು, ಶ್ರೀಗಂಧದ ಬೀಡು, ನಮ್ಮ ಹೆಮ್ಮೆಯ ನಾಡು ನೀ ಬೆಂಗಳೂರು ನೋಡು ॥ ಕರ್ನಾಟಕ॥ |
| 2 | ಬೆಂಗಳೂರು ವಿಭಾಗದ ಉದ್ದಿಮೆ ಮತ್ತು ಕೈಗಾರಿಕೆಗಳು | ಇತ್ತೀಚಿನ ವರ್ಷಗಳಲ್ಲಿ ನಮ್ಮ ಕರ್ನಾಟಕದ ಮೂಲೆ ಮೂಲೆಯ ಹಳ್ಳಿಗಳಿಂದ ಬೆಂಗಳೂರು ಮತ್ತು ಇತರೆ ದೊಡ್ಡ ನಗರಗಳಿಗೆ ಜನ ವಲಸೆ ಹೋಗುತ್ತಿದ್ದಾರೆ. ಅವರು ಏತಕ್ಕಾಗಿ ಬೆಂಗಳೂರಿಗೆ ವಲಸೆ ಹೋಗುತ್ತಾರೆ ಅಲ್ಲಿ ಯಾವ ಯಾವ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಾರೆ ಈ ವಿಷಯವನ್ನು ನಿಮ್ಮ ಹಿರಿಯರೊಂದಿಗೆ ಚರ್ಚಿಸಿ ತಿಳಿದುಕೋ. |


| | | |
|---|---|---|
| 3 | ಬೆಂಗಳೂರು ವಿಭಾಗದ ಮಹನೀಯರು ಕಲೆ ಸಾಹಿತ್ಯ, ಜಾನಪದ ಮತ್ತು ಸ್ವಾತಂತ್ರ್ಯ ವಿಭಾಗಗಳಲ್ಲಿ ನೀಡಿದ ಕೊಡುಗೆ | ಈ ಕೆಳಗೆ ನೀಡಿರುವ ಮಹನೀಯರ ಭಾವಚಿತ್ರಗಳನ್ನು ಗುರುತಿಸು, ಅವರ ಸಾಧನೆಯನ್ನು ತಿಳಿಯಲು ನಿನ್ನ ಸಮಾಜ ವಿಜ್ಞಾನ ಪಠ್ಯ ಪುಸ್ತಕ(ಭಾಗ–1) ಪುಟ ಸಂಖ್ಯೆ 15 ನ್ನು 2 ಬಾರಿ ಓದಿ ಅರ್ಥೈಸಿಕೋ.   |
| 4 | ಶಿಕ್ಷಣ ಕ್ಷೇತ್ರಕ್ಕೆ ಬೆಂಗಳೂರು ವಿಭಾಗದ ಕೊಡುಗೆ | ಮಗು ಸಿದ್ದಗಂಗಾಮಠ, ಆದಿಚುಂಚನಗಿರಿ ಮಠ ಈ ಹೆಸರುಗಳನ್ನು ಕೇಳಿದ್ದೀಯಾ? ಶಿಕ್ಷಣ ನೀಡುವಲ್ಲಿ ಮಠಗಳ ಕೊಡುಗೆ ಬಗ್ಗೆ ಹಿರಿಯರೊಂದಿಗೆ ಚರ್ಚಿಸಿ. |

DIET CHIKMAGALORE

## ಘಟಕ:– ಇತಿಹಾಸ ಪರಿಚಯ

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

| ಕ್ರ.ಸಂ | ಚಟುವಟಿಕೆಗಳು | |
|---|---|---|
| 1 | ಈ ಕೆಳಗೆ ನೀಡಿರುವ ಕರ್ನಾಟಕ ಭೂಪಟದಲ್ಲಿ 4 ಕಂದಾಯ ವಿಭಾಗಗಳನ್ನು ಗುರುತಿಸಿ |  |



**2**. ಬೆಂಗಳೂರು ವಿಭಾಗದ ಜ್ಞಾನಪೀಠ ಪ್ರಶಸ್ತಿ ಪಡೆದ ಮೂವರು ಕವಿ– ಸಾಹಿತಿಗಳಲ್ಲಿ ನಿನಗಿಷ್ಟವಾದ ಯಾರದರೊಬ್ಬರ ಜೀವನ, ಸಾಧನೆ ಮತ್ತು ಸಾಹಿತ್ಯ ಕೊಡುಗೆ ಬಗ್ಗೆ ಯೋಜನೆ ತಯಾರಿಸು, ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆ ಮತ್ತು ಸ್ನೇಹಿತರೊಂದಿಗೆ ಯೋಜನಾ ವರದಿ ಹಂಚಿಕೋ ಯೋಜನೆ ತಯಾರಿಸಲು ಹಿರಿಯರು ಮತ್ತು ಪುಸ್ತಕಗಳು ಹಾಗೂ ಇತರೆ ಮೂಲಗಳ ಸಹಾಯ ಪಡೆಯಿರಿ.

**4. ಈ ಕೆಳಗಿನ ಗದ್ಯ ಭಾಗವನ್ನು ಓದಿ ಅರಿತು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬೆಂಗಳೂರು ವಿಭಾಗದ ಅನೇಕ ಮುತ್ಸದಿಗಳು ಭಾಗವಹಿಸಿದ್ದರು. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿದ್ದ ಕೆ.ಸಿ.ರೆಡ್ಡಿಯವರು, ಎರಡನೇ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಸೇರಿದಂತೆ ವಿಶಾಲ ಮೈಸೂರು ರಾಜ್ಯದ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ, ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ, ಕಡಿದಾಳ್ ಮಂಜಪ್ಪ, ತಿ.ತಾ.ಶರ್ಮ, ಭಾಗೀರಥಮ್ಮ ಮುಂತಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಕೆಂಗಲ್ ಹನುಮಂತಯ್ಯ ಮತ್ತು ಎಸ್.ನಿಜಲಿಂಗಪ್ಪ ಅವರು ಕರ್ನಾಟಕ ಏಕೀಕರಣದ ರುವಾರಿಗಳೂ ಹೌದು.

**1**. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ ಯಾರು? ____________________________

**2**. ಕರ್ನಾಟಕ ರಾಜ್ಯ ಏಕೀಕರಣಕ್ಕಾಗಿ ದುಡಿದ ಇಬ್ಬರು ಮುಖ್ಯಮಂತ್ರಿಗಳನ್ನು ಹೆಸರಿಸಿ.

1.___________________

2___________________

3. ಬೆಂಗಳೂರು ವಿಭಾಗದ/ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಸಮಾಜವಾದಿ ಧುರೀಣರ ಹೆಸರಗಳನ್ನು ಪಟ್ಟಿ ಮಾಡಿ.

1.________________________

2.________________________

3.________________________

*************************************************************

DIET CHIKMAGALORE

## ಘಟಕ:– ಇತಿಹಾಸ ಪರಿಚಯ

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

---

**I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ನಮ್ಮ ಕರ್ನಾಟಕ ರಾಜ್ಯವನ್ನು ಎಷ್ಟು ಕಂದಾಯ ವಿಭಾಗಗಳಾಗಿ ವಿಂಗಡಿಸಲಾಗಿದೆ? ಅವುಗಳನ್ನು ಈ ಕೆಳಗೆ ಪಟ್ಟಿ ಮಾಡಿ.

_______________________________________________

_______________________________________________

_______________________________________________

_______________________________________________

_______________________________________________

2. ನಿನ್ನ ಜಿಲ್ಲೆಯು ಯಾವ ವಿಭಾಗಕ್ಕೆ ಸೇರುತ್ತದೆ?

_______________________________________________

_______________________________________________

3. ಕರ್ನಾಟಕದ ಭೂಪಟವನ್ನು ಬರೆದು 4 ಕಂದಾಯ ವಿಭಾಗಗಳನ್ನು ಗುರುತಿಸಿ.

DIET CHIKMAGALORE

**II.** ಬೆಂಗಳೂರು ವಿಭಾಗದ ಜಿಲ್ಲಾವಾರು ಭೂಪಟವನ್ನು ಬರೆದು ಜಿಲ್ಲೆಗಳನ್ನು ಗುರುತಿಸಿ ಬಣ್ಣಗಳನ್ನು ತುಂಬಿರಿ.

**III.** ಸಂಬಂಧ ಗುರುತಿಸಿ ಬರೆಯಿರಿ

1. ಜೋಗ್ ಜಲಪಾತ: ಶಿವಮೊಗ್ಗ :: ಮತ್ಯಾಲ ಮಡು ಜಲಪಾತ: ____________
2. ವಾಣಿ ವಿಲಾಸ ಅಣೆಕಟ್ಟು: ಚಿತ್ರದುರ್ಗ :: ಗಾಜನೂರು ಅಣೆಕಟ್ಟು : ____________
3. ಕಬ್ಬಿಣದ ಅದಿರು : ತುಮಕೂರು :: ಚಿನ್ನದ ಅದಿರು : ____________
4. ಬನ್ನೇರುಘಟ್ಟ ಉದ್ಯಾನವನ : ಬೆಂಗಳೂರು :: ಜೋಗಿ ಮಟ್ಟಿ : ____________
5. ಕೃಷ್ಣಮೃಗಧಾಮ : ತುಮಕೂರು :: ಗುಡವಿ ಪಕ್ಷಿಧಾಮ : ____________

**IV.** ಶಿಕ್ಷಣದಿಂದ ಮಾತ್ರವೇ ಸಮಾಜದ ಪ್ರಗತಿ ಈ ವಿಷಯ ಕುರಿತು ಸರಳ ಪ್ರಬಂಧವೊಂದನ್ನು ರಚಿಸಿ ಹಿರಿಯ/ ಪೋಷಕರ ಎದುರಿಗೆ ಮಂಡಿಸಿ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡಿ ಹಾಗೂ ಆ ಲಿಖಿತ ಪ್ರತಿಯನ್ನು ನಿಮ್ಮ ಕೃತಿ ಸಂಪುಟ– ಫೈಲ್‌ನಲ್ಲಿ ಸಂರಕ್ಷಿಸಿ.

**V.** ನಿಮ್ಮ ಮನೆಯಲ್ಲಿ ಹಿರಿಯರು– ಪೋಷಕರು ಮತ್ತು ಸ್ನೇಹಿತರಿಂದ ಜಾನಪದ ಹಾಡುಗಳು ಕಥೆಗಳು ಮತ್ತು ಒಗಟುಗಳನ್ನು ಸಂಗ್ರಹಿಸಿ ಒಂದು ಬುಕ್ ಲೆಟ್ ತಯಾರಿಸಿ.

***************************************************

DIET CHIKMAGALORE

**ತರಗತಿ: 6ನೇ** **ಅಭ್ಯಾಸ ಹಾಳೆ:1** **ನಮ್ಮ ರಾಜ್ಯ ಕರ್ನಾಟಕ ಮೈಸೂರು ವಿಭಾಗ**

**ಘಟಕ:– ಇತಿಹಾಸ ಪರಿಚಯ** **ಅಭ್ಯಾಸ ಹಾಳೆ: 1 ಕಲಿಕಾಂಶ ಚಟುವಟಿಕೆ**

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

| ಕ್ರ ಸಂ | ಕಲಿಕಾಂಶ | ರೂಪಿಸಿದ ಚಟುವಟಿಕೆ | | | |
|---|---|---|---|---|---|
| 1 | ಮೈಸೂರು ವಿಭಾಗದ ಚಾರಿತ್ರಿಕ ಹಿನ್ನಲೆಯನ್ನು ಅರಿತು ವಿವರಿಸುವರು. | ಮಕ್ಕಳೇ, ಈ ಕೆಳಗೆ ಮೈಸೂರು ವಿಭಾಗವನ್ನು ಆಳಿದ ರಾಜಮನೆತನಗಳ ಹೆಸರುಗಳನ್ನು ಅಕ್ಷರಗಳನ್ನು ಅದಲು ಬದಲು ಮಾಡಿ ನೀಡಲಾಗಿದೆ ಅವುಗಳನ್ನು ಪತ್ತೆ ಮಾಡಿ ಬರೆಯಿರಿ. | | | |
| | | 1. ಗಂರುಗ | 2. ರುಳಚೋ | 3. ಯ್ಸಳಹೊರು | 4. ರಿಹಾಲೇ |
| | | 1.__________ | 2.__________ | 3.__________ | 4.__________ |
| | | 'ಮೈಸೂರು' ಈ ಹೆಸರು ಹೇಗೆ ಬಂದಿರಬಹುದು ಎಂಬುದರ ಬಗ್ಗೆ ಪೋಷಕರಿಗೆ (ಮಹಿಷಾಸುರ ಮರ್ದನದ ಕಥೆ) ಚೆನ್ನಾಗಿ ತಿಳಿದಿದೆ. ಆ ನವರಾತ್ರಿ ಹಬ್ಬದ (ದಸರಾ) ಹಿನ್ನೆಲೆಯನ್ನು ಕೇಳಿ ತಿಳಿಯಿರಿ. ಆ ಬಗ್ಗೆ ಚಲನಚಿತ್ರಗಳು ಬಂದಿವೆ ಯು–ಟ್ಯೂಬ್‌ನಲ್ಲಿ ನೋಡುವ ಪ್ರಯತ್ನ ಮಾಡಿ. | | | |
| 2 | ಮೈಸೂರು ವಿಭಾಗದ ಪ್ರಾಕೃತಿಕ ಹಿನ್ನಲೆಯನ್ನು ಪ್ರಶಂಸಿಸುವರು. | **ಮಕ್ಕಳ ದೂರವಾಣಿ ಸಂಭಾಷಣೆ: ಗಗನ್:–** ಹಲೋ ಗಮನ ಹೇಗಿದ್ದೀಯಾ? | | | |
| | | **ಗಮನ:** ನಾವೆಲ್ಲಾರು ಚೆನ್ನಾಗಿದ್ದೇವೆ. ನೀನು ಯಾವಾಗ ಪ್ರವಾಸ ಮುಗಿಸಿ ಬಂದೆ? | | | |
| | | **ಗಗನ್:** ನಾವು ನೆನ್ನೆಯಷ್ಟೇ ಬಂದೆವು. ನಿನಗೆ ನನ್ನ ಪ್ರವಾಸದ ಅನುಭವ ಹೇಳಲೇ ಬೇಕು ಅಂತ ನಿನಗೆ ಫೋನ್ ಮಾಡಿದೆ. | | | |
| | | **ಗಮನ:** ಹೌದಾ! ಮೈಸೂರು ವಿಭಾಗದ ಪ್ರವಾಸ ಬಗ್ಗೆ ಹೇಳು ಪ್ಲೀಸ್. | | | |
| | | **ಗಗನ್:** ಹೌದು, ಈ ಮೈಸೂರು ವಿಭಾಗದಲ್ಲಿ ಪರ್ವತಗಳಿವೆ, ಕಾಡುಗಳಿವೆ, ಕರಾವಳಿಯ ಸಮುದ್ರ ಬಂದರುಗಳೂ ಇಲ್ಲಿವೆ. ನಿನಗೆ ಗೊತ್ತ ಈ ವಿಭಾಗದಲ್ಲಿ ಉಷ್ಣವಲಯದ ಮಳೆ ಮಾರುತ ವಾಯುಗುಣವಿದೆ ಎಂದು ಗೈಡ್ ಹೇಳಿದರು. ನಾವು ಶಾಲೆಗೆ ಹೋದಾಗ ಈ ಬಗ್ಗೆ ಟೀಚರ್ ಕೇಳಿ ಹೆಚ್ಚು ಅರ್ಥಮಾಡಿಕೊಳ್ಳಬೇಕು ಕಣೆ. | | | |
| | | **ಗಮನ:** ಓಕೆ. ಮತ್ತೇನು ನೋಡಿದೆ? ಹೇಳೋ ಬೇಗ ಕುತುಹಲ ಹೆಚ್ಚಾಗ್ತಿದೆ. | | | |
| | | **ಗಗನ್:** ನಾನು ಪ್ರಯಾಣದ ಉದ್ದಕ್ಕೂ ರೈತರು ಹೊಲಗಳಲ್ಲಿ ರಾಗಿ, ಭತ್ತ, ಉದ್ದು, ಹೆಸರು, ಹುರುಳಿ, ಜೋಳ ಬೆಳೆದಿರೋದನ್ನ ನೋಡಿದೆ. ಅಷ್ಟೇ ಅಲ್ಲ ಚಿಕ್ಕಮಗಳೂರು ಮತ್ತು ಅಕ್ಕಪಕ್ಕದ ಜಿಲ್ಲೆಗಳಲ್ಲಿ ಕಾಫಿ, ಟೀ, ಕಬ್ಬು, ಅಡಿಕೆ, ಮೆಣಸು, ಏಲಕ್ಕಿ, ಕಿತ್ತಳೆ, ಫೈನಾಪಲ್, ಗೋಡಂಬಿ ತೋಟಗಳನ್ನು ನೋಡಿದೆ. ಅಬ್ಬಾ ಅಲ್ಲಿನ ಪ್ರಕೃತಿ ಎಷ್ಟೊಂದು ಸುಂದರ ನೀನು ನೋಡಲೇ ಬೇಕು ಗಮನ. | | | |

DIET CHIKMAGALORE

| | | |
|---|---|---|
| | | **ಗಮನ:** ಹೇ, ಗಗನ್ ನೀನು ಅಲ್ಲಿಯ ಕಾಡು, ಬೆಟ್ಟ, ನದಿಗಳ ಬಗ್ಗೆ ಹೇಳು. |
| | | **ಗಗನ್:** ಗಮನ, ಈ ಭಾಗದಲ್ಲಿ ದಟ್ಟ ಕಾಡಿಗಳಿವೆ ಅಲ್ಲಿ ತೇಗ, ಶ್ರೀಗಂಧ, ಮತ್ತಿ, ಹೊಂಗೆ, ಮರಗಳಿವೆ. ಕಾಡಿನ ಸಫಾರಿಯಲ್ಲಿ ನಾನು ಹುಲಿ, ಸಿಂಹ, ಚಿರತೆ, ನರಿ, ಕಾಡಿಮ್ಮೆ, ಹಾವುಗಳನ್ನು ನೋಡಿದೆ. |
| | | **ಗಮನ:** ಅಬ್ಬಾ! ಅವೆಲ್ಲಾ ನೋಡಿದ್ಯಾ ಕಾಡೊಳಗೆ ಹೋಗಿದ್ಯಾ ಆಮೇಲೆ? |
| | | **ಗಗನ್:** ಹೌದು ಹೋಗಿದ್ದೆ. ಈ ವಿಭಾಗದಲ್ಲಿ ಕಾವೇರಿ, ಹೇಮಾವತಿ, ಹಾರಂಗಿ, ನೇತ್ರಾವತಿ ಕುಮಾರ ಧಾರ, ವೇದಾವತಿ, ಯಗಚಿ ಮತ್ತು ಕಪಿಲ ನದಿಗಳು ಹರಿಯುತ್ತವೆ. ಹಾಗೆ ಗಗನಚುಕ್ಕಿ, ಭರಚುಕ್ಕಿ, ಅಬ್ಬೆ ಮತ್ತು ಇರ್ಪು ಹೀಗೆ ಹಲವಾರು ಜಲಪಾತಗಳೂ ಇವೆ ಕಣೆ. |
| | | **ಗಮನ:** ಗಗನ್ ನೀನು ತುಂಬಾ ಲಕ್ಕಿ, ನಿನ್ನ ಮಾತು ಕೇಳ್ತಿದ್ರೆ ಖುಷಿಯಾಗುತ್ತೆ. |
| | | **ಗಗನ್:** ಅಷ್ಟೇ ಅಲ್ಲ, ಈ ವಿಭಾಗದ ಕಾಡುಗಳಲ್ಲಿ ಬುಡಕಟ್ಟು ಜನಾಂಗದ ಜನರು ವಾಸ ಮಾಡುತ್ತಾರೆ. ನಾಗರೀಕತೆಯ ಗಾಳಿ ಇಲ್ಲದೆ ಪ್ರಕೃತಿ ನಾಶಮಾಡದೇ ಸಂತೋಷವಾಗಿ ಜೀವನ ಮಾಡ್ತಾರೆ. ಅವರ ಜನಾಂಗಗಳ ಹೆಸರು 1. ಜೇನು ಕುರುಬರು, 2. ಮತಿಕುಡಿಯರು,<br>3. ಸೋಲಿಗರು, 4. ಹಲಸರು, 5. ಮೇದಾರರು, 6. ಕೊರಗರು, 7. ಹಕ್ಕಿಪಿಕ್ಕಿಗಳು ಅಂತ |
| | | **ಗಮನ:** ಹೇ! ಅದ್ಬುತ ಕಣೋ, ಮತ್ತೇನು ವಿಶೇಷ? |
| | | **ಗಗನ್:** ಮೈಸೂರು ವಿಭಾಗದಲ್ಲಿ ಕೃಷ್ಣರಾಜ ಸಾಗರ, ಹಾರಂಗಿ, ಹೇಮಾವತಿ ಮತ್ತು ಕಬಿನಿ ಅನ್ನೋ ಅಣೆಕಟ್ಟುಗಳು ಕೃಷಿಗೆ ಸಹಾಯ ಮಾಡ್ತಿವೆ. ಕರಾವಳಿ ಜನರು ಮೀನುಗಾರಿಕೆ ಮಾಡಿ ಅಲ್ಲಿನ ಪಧಾರ್ಥಗಳನ್ನು ಸಂಸ್ಕರಿಸಿ ಹೊರ ದೇಶಗಳಿಗೆ ರಪ್ತು ಮಾಡಿ ಹಣ ಗಳಿಸ್ತಿದ್ದಾರೆ. |
| | | **ಗಮನ:** ಗಗನ್ ಅಲ್ಲಿ ಮೃಗಧಾಮ ಮತ್ತು ಪಕ್ಷಿಧಾಮ ಇವೆ ಅಂತ ಓದಿದ್ದೆ ಅವುಗಳ ಬಗ್ಗೆ ಹೇಳೊ ಪ್ಲೀಸ್. |
| | | **ಗಗನ್:** ಹೌದು, ಮೈಸೂರು ವಿಭಾಗದಲ್ಲಿ ಮೇಲುಕೋಟೆ, ಕಾವೇರಿ, ಮಲೈ ಮಹದೇಶ್ವರ, ಪುಷ್ಪಗಿರಿ, ಅನ್ನೋ ವನ್ಯ ಮೃಗಧಾಮಗಳು ಹಾಗೆನೇ ರಂಗನತಿಟ್ಟು, ಗುಡವಿ, ಕೊಕ್ಕರೆ ಬೆಳ್ಳೂರು ಅನ್ನೋ ಪಕ್ಷಿಧಾಮಗಳು, ನಾಗರಹೊಳೆ ಮತ್ತು ಬಂಡೀಪುರ ಅಭಯಾರಣ್ಯಗಳು ಇವೆ. ಓಕೆ ಬಹಳ ಹೊತ್ತಾಯ್ತು, ಬಾಯ್ ನಾನು ಮತ್ತೆ ಸಿಗ್ತೇನೆ. |
| | | **ಗಮನ:** ಸರಿ ಇಷ್ಟೆಲ್ಲಾ ತಿಳಿಸಿ ಕೊಟ್ಟಿದ್ದಕ್ಕೆ ತುಂಬಾ ಥ್ಯಾಂಕ್ಸ್, ಬಾಯ್ ಕಣೊ. |
| | | ಮಕ್ಕಳ ಸಂಭಾಷಣೆ ದೊಡ್ಡದಾಗಿದ್ದರೂ ಬಹಳ ಸುಲಭವಾಗಿದೆ ಪದೇ ಪದೇ ಓದಿ ಹಿರಿಯರೆದುರಿಗೆ ಏಕಪಾತ್ರಾಭಿನಯ ಮಾಡಿ. |
| 3 | **ಮೈಸೂರು ವಿಭಾಗದ ಕಲೆ, ಸಾಹಿತ್ಯ, ಜಾನಪದ, ನಾಟಕ, ನೃತ್ಯ ವಿಭಾಗದ ವೈಶಿಷ್ಟತೆಗಳನ್ನು ಹೆಸರಿಸುವುದು.** | ಭಾವಚಿತ್ರಗಳಲ್ಲಿರುವ ಮಹನೀಯರನ್ನು ಮತ್ತು ಅವರ ಸಾಧನೆಯನ್ನು ಗುರುತಿಸುವುದು. ಮಕ್ಕಳೇ ಈ ಭಾವಚಿತ್ರದಲ್ಲಿರುವ ಮಹನೀಯರನ್ನು ಗುರುತಿಸು ಮತ್ತು ಅವರ ಸಾಧನೆಗಳನ್ನು ತಿಳಿಯಲು ನಿನ್ನ ಸಮಾಜ ವಿಜ್ಞಾನ (ಭಾಗ–1) ಪಠ್ಯಪುಸ್ತಕದ ಮೈಸೂರು ವಿಭಾಗ ಪಾಠವನ್ನು ಪುನರಾವರ್ತಿಸಿ ಓದಿ.<br><br> |

DIET CHIKMAGALORE

**ಘಟಕ:– ಇತಿಹಾಸ ಪರಿಚಯ** **ಅಭ್ಯಾಸ ಹಾಳೆ: 1 ಕಲಿಕಾಂಶ ಚಟುವಟಿಕೆ**

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

**1. ಮೈಸೂರು ವಿಭಾಗವನ್ನು ಆಳಿದ ರಾಜಮನೆತನಗಳೊಂದಿಗೆ ಪ್ರಸಿದ್ಧ ರಾಜರು/ ರಾಜಧಾನಿಗಳೊಂದಿಗೆ ಹೊಂದಿಸಿ ಬರೆ (ಪಠ್ಯಪುಸ್ತಕದ ಸಹಾಯ ಪಡೆದುಕೊಳ್ಳಬಹುದು)**

| | |
|---|---|
| 1. ಗಂಗರು | ಕೃಷ್ಣದೇವರಾಯ |
| 2. ಹೊಯ್ಸಳರು | ಚಿಕ್ಕ ದೇವರಾಜ ಒಡೆಯರ್ |
| 3. ವಿಜಯನಗರ ಅರಸರು | ಬನವಾಸಿ |
| 4. ಹಾಲೇರಿ | ತಲಕಾಡು |
| 5. ಅಳುಪರು | ದೊಡ್ಡ ವೀರಪ್ಪ ರಾಜ |
| 6. ಮೈಸೂರು ಒಡೆಯರು | ಸಳ |

**2. ಮಕ್ಕಳೇ ಕಲಿಕಾಂಶ ಕಾರ್ಡ್‌ನಲ್ಲಿರುವ ಗಗನ್ ಗಮನರ ಸಂಭಾಷಣೆಯನ್ನು ನೀನು ನಿನ್ನ ಗೆಳೆಯ/ ಗೆಳತಿಯೊಂದಿಗೆ ದೂರವಾಣಿಯಲ್ಲಿ ಸಂಭಾಷಿಸಿ.**

**3. ಮಕ್ಕಳೇ, ಈ ಕೆಳಗೆ ಕೊಟ್ಟಿರುವ ಚಿತ್ರಗಳಲ್ಲಿರುವ ಜಾನಪದ ಕಲಾ ಪ್ರಕಾರಗಳನ್ನು ಗುರುತಿಸಿ, ಇವೆಲ್ಲಾ ಮೈಸೂರು ವಿಭಾಗದ ಜಾನಪದ ಕಲೆಗಳು ನೆನಪಿನಲ್ಲಿಡಿ, ಈ ಕಲೆಗಳ ಬಗ್ಗೆ ನಿಮ್ಮ ಹಿರಿಯರೊಂದಿಗೆ ಚರ್ಚಿಸಿ ಮಾಹಿತಿ ಪಡೆಯಿರಿ.**

| | | |
|---|---|---|
| ವೀರಗಾಸೆ | ಯಕ್ಷಗಾನ | ಪಟಕುಣಿತ |
| ಸುಗ್ಗಿಕುಣಿತ | ಕಂಸಾಳೆ | ಚಾಡಿಕೆ |

**4. ಸಂಬಂಧ ಗುರುತಿಸಿ ಬರೆಯುವುದು: ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದದ ಸಂಬಂಧವನ್ನು ಗುರುತಿಸಿ ಬರೆಯಿರಿ.**


1. ಇಂಗ್ಲೀಷ್‌ನ ಪ್ರಸಿದ್ಧ ಕಾದಂಬರಿಕಾರರು: ರಾಜ್‌ರಾವ್ :: ಮೈಸೂರು ವಿಭಾಗದ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ/ ಸಾಹಿತಿ : ______________________
2. ಭಾವಗೀತೆಗಳು: ಕೆ. ಎಸ್. ನರಸಿಂಹಸ್ವಾಮಿ :: ವೀಣಾ ವಾದನ : ____________
3. ಪ್ರಸಿದ್ಧ ವೀಣಾ ವಾದಕರು: ದೊರೆಸ್ವಾಮಿ :: ಪ್ರಸಿದ್ಧ ಪಿಟೀಲು ವಾದಕರು : _________
4. ರಂಗಭೂಮಿಗೆ ಪ್ರಸಿದ್ಧರು : ಮಹಮದ್ ಫೀರ್ :: ಚಿತ್ರಕಲೆಗೆ ಪ್ರಸಿದ್ಧಿ : ___________
5. ಜನರಲ್ ಕಾರ್ಯಪ್ಪ ಮತ್ತು ಕೆ.ಎಸ್ ತಿಮ್ಮಯ್ಯ : ಸೈನಿಕ ಸೇವೆ :: ರಾಜರಾಮಣ್ಣ ಮತ್ತು ಯು.ಆರ್.ರಾವ್ : _____________

DIET CHIKMAGALORE

**ಘಟಕ:– ಇತಿಹಾಸ ಪರಿಚಯ** **ಅಭ್ಯಾಸ ಹಾಳೆ: 1 ಮೌಲ್ಯಮಾಪನ ಚಟುವಟಿಕೆ**

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

| | | |
|---|---|---|
| 1 | ಮೈಸೂರು ವಿಭಾಗದ ಜಿಲ್ಲಾವರು ಭೂಪಟವನ್ನು ಬರೆದು ಈ ವಿಭಾಗದ ಎಲ್ಲಾ ಜಿಲ್ಲೆಗಳನ್ನು ಹೆಸರಿಸಿ ಹಾಗೂ ಬಣ್ಣ ತುಂಬಿ. | <br>ಮೈಸೂರು ವಿಭಾಗದ ಜಿಲ್ಲಾವಾರು ಭೂಪಟ |

**2. ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಮೈಸೂರು ವಿಭಾಗದ ಕೊಡುಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

**3. ಮಕ್ಕಳೇ ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಲ್ ರವರು ದಿವಾನರಾಗಿದ್ದಾಗ ಮೈಸೂರು ಸಂಸ್ಥಾನವು ಅದ್ಭುತವಾಗಿ ಪ್ರಗತಿ ಹೊಂದಿತ್ತು. ಈ ಇಬ್ಬರಲ್ಲಿ ನಿಮ್ಮಿಷ್ಟದ ಯಾರಾದರೊಬ್ಬರ ಬಗ್ಗೆ ಕಿರು ಯೋಜನೆಯನ್ನು ತಯಾರಿಸು.**

**4. ಈ ಕೆಳಗಿನ ವಿಶೇಷತೆಗಳನ್ನು ಆಯಾ ಜಿಲ್ಲೆಗಳೊಂದಿಗೆ ಗೆರೆ ಎಳೆದು ಹೊಂದಿಸು.**

| | ಅ | ಆ |
|---|---|---|
| 1 | ಸಕ್ಕರೆ | ಶ್ರವಣಬೆಳಗೊಳ |
| 2 | ಕಾಫಿ | ಮೂಡಬಿದರೆ |
| 3 | ಯಕ್ಷಗಾನ | ಮೈಸೂರು |
| 4 | ದೇವಾಲಯಗಳು | ಕೊಡಗು |
| 5 | ಗೊಮ್ಮಟೇಶ್ವರ | ಮಂಗಳೂರು |
| 6 | ಕಲಾಕುಸುರಿ | ಹಾಸನ |
| 7 | ಪ್ರವಾಸೋಧ್ಯಮ | ದಕ್ಷಿಣ ಕನ್ನಡ |
| 8 | ತಲಕಾವೇರಿ | ಚಿಕ್ಕಮಗಳೂರು |
| 9 | ಮೀನುಗಾರಿಕೆ | ಮಂಡ್ಯ |

DIET CHIKMAGALUR

**ತರಗತಿ: 6ನೇ** **ಅಭ್ಯಾಸ ಹಾಳೆ:1** **ಘಟಕ:– ಪೌರತ್ವ**

**ಅಭ್ಯಾಸ ಹಾಳೆ: 1 ಮೌಲ್ಯಮಾಪನ ಚಟುವಟಿಕೆ**

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

1. ಒಂದು ರಾಷ್ಟ್ರಕ್ಕೆ ಸೇರಿದ ಜವಾಬ್ದಾರಿಯುತ ಸದಸ್ಯವನ್ನು ಏನೆಂದು ಕರೆಯುತ್ತಾರೆ?

2. ಭಾರತದಲ್ಲಿ ಕನಿಷ್ಟ ಎಷ್ಟು ವರ್ಷಗಳ ಕಾಲ ವಾಸವಾಗಿದ್ದರೆ ಇಲ್ಲಿಯ ಪೌರತ್ವ ಪಡೆಯಬಹುದು?

3. ಒಂದು ದೇಶ ಒದಗಿಸುವ ಹಕ್ಕುಗಳನ್ನು ಪಡೆಯಲು ಆ ದೇಶದಲ್ಲಿ ಯಾವುದನ್ನು ಹೊಂದುವುದು ಅಗತ್ಯ?

4. ಯಾರಾದರೂ ಒಬ್ಬ ವ್ಯಕ್ತಿ ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ಯಾವ ವಿಧಾನದ ಮೂಲಕ ಪೌರತ್ವ ರದ್ದುಗೊಳಿಸಬಹುದು?

5. ಭಾರತದಲ್ಲಿ ಯಾವ ವರ್ಷದಲ್ಲಿ ಅಥವಾ ವರ್ಷದ ನಂತರದ ಜನಿಸಿದವರು ಭಾರತದ ಪೌರರಾಗಿರುತ್ತಾರೆ?

6. ಬೇರೆ ದೇಶದವರು ಭಾರತಕ್ಕೆ ಬಂದು ಎಷ್ಟು ವರ್ಷಗಳವರೆಗೆ ಭಾರತದಲ್ಲಿದ್ದರೆ ಇಲ್ಲಿನ ಪೌರತ್ವ ಪಡೆಯಬಹುದು?

DIET CHIKMAGALORE

**ಅಭ್ಯಾಸ ಹಾಳೆ: 2 ಮೌಲ್ಯಮಾಪನ ಚಟುವಟಿಕೆ**

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

1. ಒಂದು ದೇಶದಲ್ಲಿ ಸ್ವಾಭಾವಿಕವಾಗಿ ಪೌರತ್ವ ಪಡೆಯಲು ಮುಖ್ಯ ಆಧಾರ ಯಾವುದು?

2. ಯಾವುದೇ ಒಂದು ದೇಶದ ಪೌರತ್ವವನ್ನು ಸಂಬಂಧಪಟ್ಟ ಕಛೇರಿಯಲ್ಲಿ ಅರ್ಜಿ ಸಲ್ಲಿಸಿ ಹೇಗೆ ಪೌರತ್ವ ಪಡೆಯಬಹುದು?

3. ಯಾವುದೇ ಭಾರತೀಯ ಪ್ರಜೆ ಬೇರೆ ದೇಶದ ಪೌರತ್ವ ಪಡೆದರೆ ಸ್ವ–ಇಚ್ಛೆಯಿಂದ ಯಾವ ವಿಧಾನದ ಮೂಲಕ ಪೌರತ್ವ ತ್ಯಾಗ ಮಾಡಬಹುದು?

4. ಭಾರತ ಮತ್ತು ಪಾಕಿಸ್ತಾನ ಯುದ್ಧ ನಡೆದು ಯುದ್ಧದಲ್ಲಿ ಪಾಕಿಸ್ತಾನವನ್ನು ಸಂಪೂರ್ಣವಾಗಿ ಭಾರತ ವಶಪಡಿಸಿಕೊಂಡರೆ ಪಾಕಿಸ್ತಾನದ ಪ್ರಜೆಗಳೆಲ್ಲಾ ಭಾರತದ ಪೌರರನ್ನಾಗಿ ಸೇರಿಸಬಹುದೇ?

DIET CHIKMAGALORE

## ಅಭ್ಯಾಸ ಹಾಳೆ: 3 ಅಭ್ಯಾಸ ಮತ್ತು ಬಳಕೆ ಚಟುವಟಿಕೆ

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

**I. ನಿಮ್ಮ ನೆರೆಹೊರೆಯಲ್ಲಿರುವ ಯಾರಾದರೂ ಚುನಾಯಿತ ಜನಪ್ರತಿನಿಧಿ/ ಬೇರೆ ದೇಶದಿಂದ ಭಾರತಕ್ಕೆ ಬಂದಿರುವ ವ್ಯಕ್ತಿಯ ಸಂದರ್ಶನ ಮಾಡಿ ಈ ಕೆಳಗಿನ ಮಾಹಿತಿ ಸಂಗ್ರಹಿಸು.**

1. ನಿಮ್ಮ ಹೆಸರೇನು?

2. ನೀವು ಯಾವ ದೇಶದವರು?

3. ನಿಮ್ಮ ಉದ್ಯೋಗವೇನು?

4. ನೀವು ಎಷ್ಟು ವರ್ಷಗಳಿಂದ ಭಾರತದಲ್ಲಿ ಇರುವಿರಿ?

5. ನೀವು ಭಾರತದ ಪೌರತ್ವ ಪಡೆದಿರುವಿರಾ?

6. ನೀವು ಯಾವ ವಿಧಾನದ ಮೂಲಕ ಭಾರತದ ಪೌರತ್ವ ಪಡೆದಿರುವಿರಿ?



DIET CHIKMAGALORE

**ತರಗತಿ: 6ನೇ** **ಅಭ್ಯಾಸ ಹಾಳೆ:1** **ಘಟಕ:– ಗ್ಲೋಬ್ ಮತ್ತು ನಕಾಶೆಗಳು**

## ಕಲಿಕಾಂಶ ಚಟುವಟಿಕೆ

**ಸೂಚನೆಗಳು:**



- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.



| 1 | ಮಾದರಿ ಗೋಳ ( ಗ್ಲೋಬ್) | ನಕ್ಷಾಶಾಸ್ತ್ರ |
|---|---|---|
| | **ಗ್ಲೋಬ್ ಅರ್ಥ:–** ಭೂಮಿಯ ಒಂದು ಚಿಕ್ಕ ಮಾದರಿ. | ನಕ್ಷೆಯನ್ನು ತಯಾರಿಸುವ ವಿಜ್ಞಾನ ಮತ್ತು ಕಲೆಗೆ **ನಕ್ಷಾಶಾಸ್ತ್ರ** ಎನ್ನುವರು. |
| | **ಗ್ಲೋಬ್‌ನ ಲಕ್ಷಣಗಳು:** | **ಅಟ್ಲಾಸ್:** |
| | ಇದು ಭೂಮಿಯ ನೈಜ ಗೋಳಾಕಾರವನ್ನು ತೋರಿಸುತ್ತದೆ. | ವಿವಿಧ ಪ್ರಕಾರದ ನಕ್ಷೆಗಳನ್ನು ಸೇರಿಸಿ ತಯಾರಿಸಿದ ಪುಸ್ತಕವನ್ನು ಅಟ್ಲಾಸ್ ಅಥವಾ ನಕಾಶೆ ಪುಸ್ತಕ ಎನ್ನುವರು. |
| | ಭೂಮಿಯ ಹಲವು ಲಕ್ಷಣಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವುದು. | |
| | ಇದೊಂದು ಸರಳವಾದ ಕಲಿಕಾ ಉಪಕರಣ. | **1. ಮಾಪನ ಆಧಾರಿತ ನಕ್ಷೆಗಳು** |
| | ಈ ಮಾದರಿಯನ್ನು ಮೇಜಿನ ಮೇಲೆ ಇಟ್ಟು ತಿರುಗಿಸಿದಾಗ ಭೂಮಿಯ ವಿವಿಧ ಭೌಗೋಳಿಕ ಪರಿಕಲ್ಪನೆಯನ್ನು ತಿಳಿಯಬಹುದು. |    |

DIET CHIKMAGALURE

| | | | | |
|---|---|---|---|---|
| | **ಗ್ಲೋಬ್‌ನ ಉಪಯೋಗಗಳು:** ಭೂಮಿಯ ಆಕಾರ ತಿಳಿಯಲು ಸಹಾಯಕವಾಗುತ್ತದೆ. | | | |
| | ಭೂಮಿಯ ಮೇಲಿನ ಭೂಖಂಡ ಸಮುದ್ರ ಮತ್ತು ಸಾಗರಗಳ ಸ್ಥಾನ ಗಾತ್ರ ಮತ್ತು ಆಕಾರ ತಿಳಿಯಲು ನೆರವಾಗುತ್ತದೆ. | | | |
| | ಇದು ಅಕ್ಷಾಂಶ ಮತ್ತು ರೇಖಾಂಶಗಳಿಂದ ನಿಖರ ಸ್ಥಾನ ಮತ್ತು ರಾಜಕೀಯ ಗಡಿಗಳನ್ನು ತಿಳಿಯಲು ಸಹಾಯಕವಾಗುತ್ತದೆ. | | | |
| | ಭೂ ಅಕ್ಷದ ಓಲುವಿಕೆ, ಭೂಮಿಯ ಚಲನೆಗಳು ದೈನಂದಿನ ಮತ್ತು ವಾರ್ಷಿಕ ಚಲನೆ ಹಾಗೂ ಅವುಗಳ ಪರಿಣಾಮ ತಿಳಿಯಲು ಸಹಾಯಕವಾಗುತ್ತದೆ. ಉದಾ:- ಹಗಲು- ರಾತ್ರಿ. ಋತುಗಳು | ಚಿಕ್ಕ ಪ್ರದೇಶವನ್ನು ಪ್ರತಿನಿಧಿಸುತ್ತದೆ. ಉದಾ: ಸಂದಾಯ ನಕ್ಷೆ/ ಸ್ಥಳೀಯ ಸ್ವರ/ ಘನ ನಕ್ಷೆಗಳು | ವಿಶಾಲವಾದ ಪ್ರದೇಶಗಳನ್ನು ನಿರೂಪಿಸುತ್ತವೆ. ಉದಾ: ಸಂದಾಯ ನಕ್ಷೆ/ ಸ್ಥಳೀಯ ಸ್ವರ/ ಘನ ನಕ್ಷೆಗಳು | |
| 2 | **ನಕ್ಷೆಗಳು** (ನಕಾಶೆಗಳು) (ವಿವಿಧ ನಕ್ಷೆಗಳನ್ನು ಬಳಸಿ ಅರ್ಥೈಸಿಕೊಳ್ಳುವುದು) | **2. ಉದ್ದೇಶ ಆಧಾರಿತ ನಕ್ಷೆಗಳು** | | |
| | ನಕ್ಷೆಗಳು ಭೂಮಿಯ ಪೂರ್ಣ ಅಥವಾ ಭಾಗಶ: ಭಾಗವನ್ನು ಸಮತಲದ ಮೇಲೆ ಮಾಪನಕ್ಕೆ ಅನುಗುಣವಾಗಿ ರೂಪಿಸುವ ಆಕೃತಿಯೇ ನಕ್ಷೆಯಾಗಿದೆ. | ಸ್ವಾಭಾವಿಕ ನಕ್ಷೆಗಳು | ರಾಜಕೀಯ ನಕ್ಷೆಗಳು | ಹಂಚಿಕೆ ನಕ್ಷೆಗಳು |
| | | ಇವು ನೈಸರ್ಗಿಕ ವಿಷಯಗಳಿಗೆ ಸಂಬಂಧಿಸಿದೆ. ಉದಾ: ಪರ್ವತ, ಪ್ರಸ್ಥಭುಮಿ, ಬಯಲು ಪ್ರದೇಶ ನದಿ ಇತ್ಯಾದಿ. | ಇವು ರಾಜ್ಯ, ದೇಶ, ಖಂಡ ಮತ್ತು ಅವುಗಳ ಸ್ಥಾನ, ವಿಸ್ತೀರ್ಣ ಇತ್ಯಾದಿ ತೋರಿಸುತ್ತವೆ. | ಈ ನಕ್ಷೆಗಳು ಭೂ ಬಳಕೆ, ಉಷ್ಣಾಂಶ, ಮಳೆ, ಮುಖ್ಯ ಜನಸಂಖ್ಯೆ, ಸ್ವಾಭಾವಿಕ ಸಸ್ಯಗಳು, ಖನಿಜಗಳು, ಬೆಳೆಗಳು, ರಸ್ತೆ, ರೈಲು, ಜಲಮಾರ್ಗಗಳು ಇತ್ಯಾದಿಗಳನ್ನು ತೋರಿಸುತ್ತದೆ. |

DIET CHIKMAGALORE

| | ನಕ್ಷೆಯ ಮೂಲಾಂಶಗಳು | ಭೌಗೋಳಿಕ ಸಂಕೇತಗಳು |
|---|---|---|
| | |  |
| | ಅ) **ಶೀರ್ಷಿಕೆ (ತಲೆಬರಹ):–** ಪ್ರತಿಯೊಂದು ನಕ್ಷೆಯು ಅವಶ್ಯಕವಾಗಿ ಶೀರ್ಷಿಕೆಯನ್ನು ಹೊಂದಿರಬೇಕು. ಉದಾ: ಭಾರತ ಭೌಗೋಳಿಕ ಲಕ್ಷಣಗಳು, ಭಾರತದ ರಾಜಕೀಯ ನಕ್ಷೆ |  |
| | ಆ) **ಮಾಪನ:–** ಭೂಮಿಯ ಮೇಲಿನ ವಾಸ್ತವ ದೂರಕ್ಕೂ ಮತ್ತು ನಕಾಶೆಯ ಮೇಲಿನ ದೂರಕ್ಕೂ ಇರುವ ಪರಿಮಾಣ. | |
| | ಇ) **ಅಕ್ಷಾಂಶ ಮತ್ತು ರೇಖಾಂಶ:–** ಇವು ಕಾಲ್ಪನಿಕ ರೇಖೆಗಳ ಜಾಲವಾಗಿದೆ. ನಕಾಶೆ ಮೇಲಿನ ಸ್ಥಳವೊಂದರ ಸ್ಥಾನ, ದೂರ ಮತ್ತು ದಿಕ್ಕುಗಳನ್ನು ಗುರುತಿಸುವುದಕ್ಕೆ ಸಹಾಯಕವಾಗುತ್ತದೆ. | |
| | ಈ) **ದಿಕ್ಕು:** ನಕ್ಷೆಯಲ್ಲಿ ಉತ್ತರ ಅಕ್ಷರವುಳ್ಳ ಭಾಗದ ಗುರುತಿನ ಚಿಹ್ನೆಯಿಂದ ಉತ್ತರ ದಿಕ್ಕನ್ನು ರೂಪಿಸಲಾಗುತ್ತದೆ. ಭಾರತ ತುದಿ ಉತ್ತರಕ್ಕೆ ನಿರ್ದೇಶಕವಾಗಿರುತ್ತದೆ. |  |
| | ಉ) **ಸೂಚಿ:–** ನಕಾಶೆಯಲ್ಲಿ ತೋರಿಸಿರುವ ಎಲ್ಲಾ ಲಕ್ಷಣಗಳನ್ನು ಸೂಚಿಸುತ್ತದೆ. ಸೂಚಿಯಲ್ಲಿ ವಿವಿಧ ಬಣ್ಣಗಳು ಮತ್ತು ಭೌಗೋಳಿಕ ಚಿಹ್ನೆಗಳನ್ನು ಬಳಸಲಾಗುತ್ತದೆ. | |


| | ನಕಾಶೆಯ ಉಪಯೋಗಗಳು | ವರ್ಣ ಸಂಕೇತಗಳು |
|---|---|---|
| | ನಗರ, ಜಿಲ್ಲೆ, ರಾಜ್ಯ, ದೇಶ, ಖಂಡ ಮುಂತಾದವುಗಳ ಸ್ಥಳ ನಿರ್ದೇಶನ ತಿಳಿಯಲು ಸಹಾಯಕವಾಗಿದೆ. | <br>ವರ್ಣ ಸಂಕೇತಗಳು |
| | ಭೌತಿಕ ಲಕ್ಷಣಗಳನ್ನು ಸೂಚಿಸಲು ಸಹಕಾರಿಯಾಗಿದೆ. ಉದಾ: ಪರ್ವತ, ಪ್ರಸ್ಥಭೂಮಿ | |
| | ರಸ್ತೆ, ರೈಲು, ವಾಯುಮಾರ್ಗಗಳನ್ನು ಅರಿಯಲು ಅನುಕೂಲವಾಗುತ್ತದೆ. | |
| | ಬೆಳೆಗಳು, ಖನಿಜಗಳು, ಕೈಗಾರಿಕೆಗಳು ಇತ್ಯಾದಿಗಳ ಹಂಚಿಕೆಯನ್ನು ತಿಳಿಯಲು ನೆರವಾಗುತ್ತದೆ. | |
| | ಒಂದು ಸಂಕೇತವು ಒಂದು ವಸ್ತುವಿನ ಚಿಹ್ನೆಯಾಗಿದೆ. | |
| | **4. ನಕಾಶೆಯನ್ನು ಓದುವಿಕೆ** | <br>ನಕ್ಷೆ ಓದುವ ವಿಧಾನದ ನಿರೂಪಣೆ |
| | **ಅ. ಸ್ಥಳ ಗಮನಿಸುವಿಕೆ:** ಸ್ಥಳಗಳನ್ನು ತಿಳಿಯಲು ನಾವು ಅಕ್ಷಾಂಶ ಮತ್ತು ರೇಖಾಂಶಗಳ ಬಗ್ಗೆ ತಿಳಿಯಬೇಕು. | |
| | **ಆ. ದಿಕ್ಕು ಗುರುತಿಸುವಿಕೆ:** ನಕಾಶೆ ಮೇಲಿನ ಸ್ಥಳದ ದಿಕ್ಕನ್ನು ತಿಳಿಯಲು ಉತ್ತರ ದಿಕ್ಕಿಗೆ ಮುಖ ಮಾಡಿ ಭಾಗದ ಚಿಹ್ನೆಯನ್ನು ತಿಳಿದರೆ ಉಳಿದ ದಿಕ್ಕುಗಳನ್ನು ಸರಳವಾಗಿ ತಿಳಿಯಬಹುದು. | |
| | **ಇ. ಸ್ಥಳಗಳ ನಡುವಿನ ಅಂತರ ಗುರುತಿಸುವಿಕೆ:** ಎರಡು ಸ್ಥಳಗಳ ನಡುವಿನ ಅಂತರ ತಿಳಿಯಲು ನಕಾಶೆಯಲ್ಲಿ ಕೊಟ್ಟಿರುವ ಮಾಪಕವು ಸಹಕಾರಿಯಾಗುತ್ತದೆ. | |

**ಕಲಿಕಾಂಶ ಚಟುವಟಿಕೆ**


**ಸೂಚನೆಗಳು:**

- **ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ**
- **ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.**
- **ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.**


| | | |
|---|---|---|
| 1. | ಈ ಭಾರತದ ಪ್ರಾಕೃತಿಕ ನಕ್ಷೆಯನ್ನು ಗಮನಿಸಿ ಕೆಳಗೆ ಕೊಟ್ಟಿರುವ ಬಣ್ಣಗಳು ಮತ್ತು ಅದಕ್ಕೆ ಸಂಬಂಧಿಸಿದ ಪ್ರಾಕೃತಿಕ ಸಂಗತಿಗಳನ್ನು ಹೊಂದಿಸಿ ಬರೆಯಿರಿ. | 2. ನಿಮ್ಮ ಪಠ್ಯಪುಸ್ತಕ ಪುಟ ಸಂಖ್ಯೆ 129 ರಲ್ಲಿರುವ ನಕ್ಷೆ ಬಳಸಿ ಕೆಳಗೆ ನೀಡಿರುವ ನಗರಗಳ ನಡುವಿನ ನೇರ ಅಂತರ ಕಂಡು ಹಿಡಿದು ಮುಂದೆ ಕೊಟ್ಟಿರುವ ಬಾಕ್ಸ್‌ನಲ್ಲಿ ಬರೆಯಿರಿ. (1ಕಿಮೀ= 60ಕಿಮೀ) ಬೇಕಾದ ಸಾಧನಗಳು: ದಾರ, ಅಳತೆ ಪಟ್ಟಿ, ಕರ್ನಾಟಕ ನಕ್ಷೆ. |




ವರ್ಣ ಸಂಕೇತಗಳು



| | | |
|---|---|---|
| | ಬೆಟ್ಟ– ಎತ್ತರ ಪರ್ವತಗಳಿಗಿಂತ ಕಡಿಮೆ ಎತ್ತರದ ಭಾಗ | ಅ. ಚಿಕ್ಕಮಗಳೂರು ಮತ್ತು ಶಿವಮೊಗ್ಗ ನಡುವಿನ ಅಂತರ______ |
| | ಅತಿ ಎತ್ತರವಾದ ಪರ್ವತಗಳು | ಆ. ಬೆಂಗಳೂರು ಮತ್ತು ಮೈಸೂರು ನಡುವಿನ ಅಂತರ__________ |
| | ಹಿಮದಿಂದಾವೃತ ಪ್ರದೇಶ | ಇ. ಉಡುಪಿ ಮತ್ತು ಹಾಸನದ ನಡುವಿನ ಅಂತರ__________ |
| | ಜಲಭಾಗಗಳು | |
| | ಮೈದಾನ ಮತ್ತು ತಗ್ಗು ಪ್ರದೇಶ | |
| | ಮೈದಾನಗಳಿಗಿಂತ ಎತ್ತರವಾದ ಭೂಭಾಗಗಳು | |

| | | |
|---|---|---|
| | ಬೆಟ್ಟ– ಎತ್ತರ ಪರ್ವತಗಳಿಗಿಂತ ಕಡಿಮೆ ಎತ್ತರದ ಭಾಗ | |
| 3 | ಕೆಳಗಿನ ಭಾರತದ ರಾಜಕೀಯ ನಕ್ಷೆಯನ್ನು ವೀಕ್ಷಿಸಿ ಕೊಟ್ಟಿರುವ ನಕ್ಷೆಯ ಮೂಲಾಂಶಗಳನ್ನು ಸೂಚಿನಿಂದ ಗುರುತಿಸಿ. (ಶೀರ್ಷಿಕೆ, ಮಾಪನ, ದಿಕ್ಕು, ಸೂಚಿ, ಅಕ್ಷಾಂಶ ಮತ್ತು ರೇಖಾಂಶ) | 4. ಈ ಭಾರತದ ಬಾಹ್ಯ ನಕ್ಷೆಯನ್ನು ರಚಿಸಿ, ಸೂಕ್ತ ಬಣ್ಣವನ್ನು ತುಂಬಿ. ತಮ್ಮದೇ ಪ್ರಾಕೃತಿಕ ನಕ್ಷೆ ರಚಿಸಿ. ಸೂಚನೆ: (ಮೂಲ ಬಣ್ಣಗಳನ್ನು ಮಾತ್ರ ಬಳಸಿ) |
| |   | |

DIET CHIKMAGALORE

**ತರಗತಿ: 6ನೇ** **ಅಭ್ಯಾಸ ಹಾಳೆ: 2** **ಘಟಕ:– ಗ್ಲೋಬ್ ಮತ್ತು ನಕಾಶೆಗಳು**

## ಮೌಲ್ಯಮಾಪನ ಚಟುವಟಿಕೆ

**ಸೂಚನೆಗಳು:**

- ಕೆಳಕಂಡ ಚಟುವಟಿಕೆಗಳನ್ನು ಕ್ರಮಾನುಗತವಾಗಿ ನಿರ್ವಹಿಸುತ್ತಾ ಸಾಗಿರಿ.
- ನಿಮ್ಮ ಉತ್ತರಗಳನ್ನು ನೀಡಿರುವ ಸ್ಥಳಗಳಲ್ಲಿ ತಪ್ಪಿಲ್ಲದಂತೆ ಬರೆಯಿರಿ.
- ಅಧ್ಯಾಯದ ಎಲ್ಲಾ ಚಟುವಟಿಕೆಗಳನ್ನು ಮಾಡಿದ ನಂತರ ನಿಮ್ಮ ಅಭ್ಯಾಸ ಹಾಳೆಗಳನ್ನು ನಿಮ್ಮ ವಿಷಯ ಶಿಕ್ಷಕರಿಗೆ ನೀಡಿ ಹಿಮ್ಮಾಹಿತಿ ಪಡೆಯಿರಿ.

1. **ನಕ್ಷೆಯ ಕೆಳಗೆ ಕೊಟ್ಟಿರುವ ಆವರಣ ನಕ್ಷೆಯ ವಿಧಗಳನ್ನು ಹೆಸರಿಸಿ.**

| ದೊಡ್ಡ ಪ್ರಮಾಣದ ನಕ್ಷೆ | ಚಿಕ್ಕ ಪ್ರಮಾಣದ ನಕ್ಷೆ | ಪ್ರಾಕೃತಿಕ ನಕ್ಷೆ | ರಾಜಕೀಯ ನಕ್ಷೆ | ಹಂಚಿಕೆ ನಕ್ಷೆ |
|---|---|---|---|---|
| | | | | |

**2. ನಾನು ಯಾರು ಹೇಳಿ?**

(ಗ್ಲೋಬ್, ಅಟ್ಲಾಸ್, ನಕ್ಷೆ, ನಕ್ಷಾಶಾಸ್ತ್ರ, ನಕ್ಷಾಸೂಚಿ)

ಅ. ಭೂಮಿಯ ಒಂದು ಚಿಕ್ಕ ಮಾದರಿ ____________


ಆ. ನಕ್ಷೆಯನ್ನು ತಯಾರಿಸುವ ವಿಜ್ಞಾನ ಮತ್ತು ಕಲೆ ____________

ಇ. ವಿವಿಧ ಪ್ರಕಾರದ ನಕ್ಷೆಗಳನ್ನು ಸೇರಿಸಿ ತಯಾರಿಸಿದ ಪುಸ್ತಕ ____________

ಈ. ನಕ್ಷೆಯಲ್ಲಿ ಸೂಚಿಸಲು ಮತ್ತು ಗಮನಿಸುವುಕ್ಕಾಗಿ ಬಳಕೆ ಮಾಡುವ ಯಾವುದೇ ಸೂಚಿ ________

ಉ. ಭೂಮಿಯ ಪೂರ್ಣ ಅಥವಾ ಭಾಗಶ: ಭಾಗವನ್ನು ಸಮತಲದ ಮೇಲೆ ಮಾಪನಕ್ಕೆ ಅನುಗುಣವಾಗಿ ರಚಿಸುವ ಆಕೃತಿ ____________

**3. ಪಠ್ಯಪುಸ್ತಕದ ಪುಟಸಂಖ್ಯೆ 126 ರಲ್ಲಿರುವ ನಕ್ಷಾ ಸೂಚಿ ವೀಕ್ಷಿಸಿ ಸಂಕೇತಗಳು ಮತ್ತು ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಹೊಂದಿಸಿ ಬರೆಯಿರಿ.**




DIET CHIKMAGALORE